**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,</u>**

**<u>ಪೊನ್ನಂಪೇಟೆ.</u>**

**ಸಿ.ಸಿ. ನಂ.1835/2022 ಫ್ರಾ.ಸಾ –5**

**ಚಾ.ಸಾ –5**

**<u>ದಿನಾಂಕಃ 04.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರದೀಪ್ |
| ತಂದೆಯ ಹೆಸರು | : | ಪುಟ್ಟೆಗೌಡ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಅಬಕಾರಿ ಕಚೇರಿಯಲ್ಲಿ ಕಾನ್ ಸ್ಟೇಬಲ್ |
| ವಾಸ ಸ್ಥಳ | : | ವಿರಾಜಪೇಟೆ |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–</u>**

ನಾನು 20.11.2019 ರಿಂದ ಇಲ್ಲಿಯವರೆಗೂ ಅಬಕಾರಿ ಕಚೇರಿ ವಿರಾಜಪೇಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 11.12.2021 ರಂದು ಚಾಸಾ 1, ಚಾಸಾ 9, ಚಾಸಾ 4, 6 ಮತ್ತು ನಾನು ಇಲಾಖಾ ವಾಹನದಲ್ಲಿ ತಿತಿಮತಿ ಗ್ರಾಮದ ಮತ್ತಿಗೋಡು ಸಾಕಾಣೆ ಶಿಬಿರದ ಹತ್ತಿರ ಗಸ್ತು ಮಾಡುವಾಗ 12.20 ಕ್ಕೆ ಮಧ್ಯಾಹ್ನ ನಮಗೆ KA–20–EP–2878 ಒಂದು ಬಿಳಿ ಮತ್ತು ನೀಲಿ ಮಿಶ್ರಿತ ಡಿಯೋ ಗಾಡಿಯಲ್ಲಿ ಒಬ್ಬ ವ್ಯಕ್ತಿ ಆಣೆಚೌಕೂರು ನಂತರ ಗೋಣಿಕೊಪ್ಪ ಮುಖ್ಯ ರಸ್ತೆಯಲ್ಲಿ ಅಕ್ರಮವಾಗಿ ಗಾಂಜಾ ಸಾಗಾಟನೆ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿರುತ್ತದೆ. ಚಾಸಾ 1 ರವರು ಈ ಮಾಹಿತಿಯನ್ನು ಅಬಕಾರಿ ಉಪ ಅಧೀಕ್ಷಕರಿಗೆ ತಿಳಿಸಿ ಅವರಿಂದ ಮೌಖಿಕವಾಗಿ ಶೋಧನೆ ಮಾಡಲು ಆದೇಶವನ್ನು ಪಡೆಯುತ್ತಾರೆ. ಚಾಸಾ 2 ಮತ್ತು 3ರವರರಿಗೆ ಈ ಬಗ್ಗೆ ಮಾಹಿತಿ ಕೊಟ್ಟು ಪಂಚರಾಗಲು ಕೇಳಿ ನೋಟೀಸ್ ಚಾಸಾ 1 ರವರು

ನೀಡಿರುತ್ತಾರೆ. ಚಾಸಾ 2 ಮತ್ತು 3 ಸಾಕಾಣೆ ಶಿಬಿರದ ಹತ್ತಿರ ಬಂದು ಮೇಲೆ ಹೇಳಿದ ವಾಹನದಿಂದ ಒಬ್ಬ ವ್ಯಕ್ತಿ ಬರುವುದು ಕಂಡು ಬಂತು. ಆ ವಾಹನವನ್ನು ನಿಲ್ಲಿಸಲು ಹೇಳಿದೆವು. ಆ ವ್ಯಕ್ತಿ ಗಾಬರಿಯಲ್ಲಿ ಗಾಡಿಯನ್ನು ನಿಲ್ಲಿಸಿದನು, ಆತನನ್ನು ವಿಚಾರಿಸಿದಾಗ ಅವನ ಹೆಸರು ಸಂತೋಷ ಚಿನ್ನ ಬೋವಿ , 25 ವರ್ಷ, ವಾಸ ಸತ್ಯಗಾಲ ಗ್ರಾಮ, ಪಂಚವಳ್ಳಿ ಅಂಚೆ, ಪಿರಿಯಾಪಟ್ಟಣ ತಾಲೂಕು ಎಂದು ಹೆಸರು ವಿಳಾಸ ಹೇಳಿದ. ಮಾಹಿತಿ ಬಂದ ಬಗ್ಗೆ ತಪಾಸಣೆ ಮಾಡಲು ಕೋರಿದೆವು. ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಕಾಲಾವಕಾಶ ಇರಲಿಲ್ಲ, ಸ್ಥಳದಲ್ಲೆ ಅದನ್ನು ತಯಾರಿಸಿಕೊಂಡು ಚಾಸಾ 2 ಮತ್ತು 3 ರವರ ಸಹಿಗಳನ್ನು ಅದಕ್ಕೆ ಪಡೆದೆವು. ಚಾಸಾ 2 ಮತ್ತು 3 ರ ಸಮಕ್ಷಮ ವಾಹವನ್ನು ಶೋಧಿಸಿದಾಗ ಸೀಟಿನ ಕೆಳಗೆ ಕಪ್ಪು ಕವರ್ ಕಂಡು ಬಂದಿತು ಅದರಲ್ಲಿ ಬಿಳಿ ಬಣ್ಣದ ಪೊಟ್ಟಣಗಳು ಇದ್ದು, ಅದು ತೆರೆದು ನೋಡಿದಾಗ ಗಾಟೆನಿಂದ ಕೂಡಿತ್ತು. ಅದು ಕಾಂಡ ಮತ್ತು ಬೀಜಗಳಿಂದ ಇದ್ದ ಗಾಂಜಾ ಎಂದು ದೃಢಪಡಿಸಿಕೊಂಡು ಮಾರಾಟ ಮಾಡುವ ಉದ್ದೇಶಕ್ಕೆ ಹೋಂದಿದ್ದ ಎಂದು ತಿಳಿದುಕೊಂಡೆವು. ಆತನನ್ನು ದಸ್ತಗಿರಿ ಮಾಡಿದೆವು. ಆರೋಪಿಯ ಸಹೋದರಿ ಮಂಜು ಅವರಿಗೆ ದಸ್ತಗಿರಿ ಬಗ್ಗೆ ತಿಳಿಸಿ ಅವರನ್ನು ಸ್ಥಳಕ್ಕೆ ಕರೆಸಿಕೊಂಡು ನೋಟೀಸ್ ಗೆ ಅವರ ಸಹಿಯನ್ನು ಪಡೆದವು. ನಮ್ಮ ಬಳಿ ಇದ್ದಂತಹ ತೂಕದ ಡಿಜಿಟಲ್ ಯಂತ್ರದಿಂದ ಅದನ್ನು ತೂಕ ಮಾಡಿದಾಗ 120 ಗ್ರಾಂ ಒಣ ಗಾಂಜಾ ಕಂಡುಬಂದಿತು. ವಾಹನವನ್ನು ಮತ್ತು ಇದನ್ನು ಅಮಾನತ್ತು ಪಡೆಸಿಕೊಂಡೆವು. ಅಷ್ಟು ಗಾಂಜಾವನ್ನು ನ್ಯಾಯಾಧೀಶರ ಮುಂದೆ Inventory ಮಾಡಿಸಲು ಬೇಕು ಎಂದು ಆರೋಪಿಗೆ ತಿಳಿಸಿದೆವು. ಅದನ್ನು ಶೀಲು ಮಾಡಿದ ನಂತರ ಶೀಲಿನ ನಕಲು ಪ್ರತಿಯನ್ನು ಮಾದರಿ ಚೀಟಿಗೆ ಆರೋಪಿಯ ಮತ್ತು ಚಾಸಾ 1 ಮತುತ 2 ರ ಸಹಿಗಳನ್ನು ಪಡೆದೆವು. ನಂತರ ಆ ಸ್ಥಳದಲ್ಲಿ ಮಹಜರ್ ಕ್ರಮವನ್ನು 1 ಗಂಟೆಯಿಂದ 2 ಗಂಟೆಯವರೆಗೆ ಮಾಡಿದ್ದು

ಮಹಜರ್ ವೇಳೆ ಫೋಟೋ ತೆಗೆಯಲಾಯಿತು. ಫೋಟೋ ತೆಗೆದ ಬಗ್ಗೆ Electronic evidence ನ ಪ್ರಮಾಣ ಪತ್ರ ನೀಡಲಾಯಿತು. ಸಾಕ್ಷಿಯು ನಿ.ಪಿ. 2 ದಾಖಲೆಯಲ್ಲಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು 2 ಡಿ ಎಂದು ಗುರುತಿಸಲಾಯಿತು. ಫೋಟೋ ತೆಗೆದ ಬಗ್ಗೆ Electronic evidence ನ ಪ್ರಮಾಣ ಪತ್ರವನ್ನು ನಿ.ಪಿ. 29, ಸಹಿಯನ್ನು 29(ಎ) ಎಂದು ಗುರುತಿಸಲಾಯಿತು. ನಿ.ಪಿ. 6 ರಿಂದ 17 ಫೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಮುದ್ದೆಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. M.H.N ವಕೀಲರಿಂದಃ**

12.20 ಕ್ಕೆ ಮಾಹಿತಿ ಬಂದಿದ್ದು, 20 ನಿಮಿಷದ ಒಳಗೆ ಚಾಸಾ 2 ಮತ್ತು 3 ರವರಿಗೆ ನೋಟೀಸ್ ಕರೆಸಿಕೊಂಡೆವು. ನಾನು ಮತ್ತು ಚಾಸಾ 6 ಪಂಚರನ್ನು ಕರೆತರಲು ಹೋಗಿದ್ದೆವು. ಆರೋಪಿ 1.15 ಅಲ್ಲಿಗೆ ಬಂದರು. ಆರೋಪಿಯು ಬಂದ 5 ರಿಂದ 10 ನಿಮಿಷಕ್ಕೆ ಶೋಧನಾ ವಾರೆಂಟ್ ಅನ್ನು ತಯಾರಿಸಿದೆವು. ಆರೋಪಿಯಿಂದ ಸಿಕ್ಕ ಕಪ್ಪು ಕವರ್ ನ್ಯಾಯಾಲಯದಲ್ಲಿ ಇಲ್ಲ ಎಂದರೆ ಸರಿ. ತೂಕ ಮಾಡಿದಾಗ ಪ್ರತ್ಯೇಕ ಪ್ಯಾಕೇಟ್ ಗಳ ತೂಕ ಮಾಡಲಿಲ್ಲ, ಒಟ್ಟಿಗೆ ಮಾಡಿರುತ್ತೇವೆ. ಸ್ಥಳದಲ್ಲಿ ನಿ.ಪಿ. 5 ದಾಖಲೆಗೆ ಚಾಸಾ 2 ಮತ್ತು 3 ರವರ ಸಹಿ ಪಡೆಯಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.6 ಮತ್ತು 7 Original ಫೋಟೋಗಳು ಅಲ್ಲ ಎಂದರೆ ಸರಿಯಲ್ಲ. Inventory ಅನ್ನು ನ್ಯಾಯಾಧೀಶರ ಮುಂದೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಂಚವಳ್ಳಿ ಆಲದೂರು ಬಳಿ ಅರಣ್ಯ ಶುರು ಆಗುವಾಗ ಒಂದು ಚೆಕ್ ಪೋಸ್ಟ್ ಇನ್ನೊಂದು ಚೆಕ್ ಪೋಸ್ಟ್ ಆನೆಚೌಕೂರು ಇದೆ ಎಂದರೆ ಆನೆಚೌಕೂರು ಚೆಕ್ ಪೋಸ್ಟ್ ಮಾತ್ರ ಇರುತ್ತದೆ. ಮೇಲೆ ಹೇಳಿದಂತೆ ನಮಗೆ ಯಾವುದೇ ಮಾಹಿತಿ ಬಂದಿಲ್ಲ ಆರೋಪಿಯನ್ನು ನಾನು

ಹಿಡಿದಿಲ್ಲ, ಅವರ ವಶದಿಂದ ಗಾಂಜಾ ಸಿಕ್ಕಿಲ್ಲ,ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಫೋಟೋಗಳನ್ನು ತೆಗೆದಿಲ್ಲ ಸಾಕ್ಷ್ಯ ಪ್ರಮಾಣಪತ್ರಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇರುವುದಿಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ